# All India Radio: Bangalore
# National Bulletin In Kannada
# 01.03.2026  19.35 p.m.
## ಆಕಾಶವಾಣಿ, ಬೆಂಗಳೂರು

## ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ತಮಿಳುನಾಡಿನಲ್ಲಿಂದು ಚಾಲನೆ ದೊರೆತಿರುವ ಯೋಜನೆಗಳಿಂದ ಆರ್ಥಿಕತೆಗೆ ಉತ್ತೇಜನ, ಜನರ ಜೀವನ ರೂಪಾಂತರ - ಪ್ರಧಾನಮಂತ್ರಿ ನರೇಂದ್ರ ಮೋದಿ

೨. ಇರಾನ್ ಪರಮೋಚ್ಚ ನಾಯಕ ಖಮೇನಿ ಹತ್ಯೆ ಖಂಡಿಸಿ ವಿಶ್ವದ ಹಲವೆಡೆ ಪ್ರತಿಭಟನೆ; ಸಂತಾಪಗಳ ಮಹಾಪೂರ

೩. ಇರಾನ್‌ನ ಮಧ್ಯಂತರ ಸರ್ವೋಚ್ಛ ನಾಯಕರಾಗಿ ಹಿರಿಯ ಧರ್ಮಗುರು ಅಯತೊಲ್ಲಾ ಅಲಿರೆಜಾ ಅರಾಫಿ ನೇಮಕ

೪. ಕೊಲ್ಕತ್ತಾದಲ್ಲಿ ನಡೆಯುತ್ತಿರುವ ಐಸಿಸಿ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಭಾರತ-ವೆಸ್ಟ್ ಇಂಡಿಸ್ ಮುಖಾಮುಖಿ, ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ

೫. ಹೈದರಾಬಾದ್‌ನಲ್ಲಿ ಇದೇ ೮ ರಿಂದ ೧೪ ರವರೆಗೆ ಫೆಡರೇಷನ್ ಇಂಡಿಯಾ ಹಾಕಿ ವಿಶ್ವಕಪ್ ೨೦೨೬ರ ಅರ್ಹತಾ ಪಂದ್ಯಗಳಿಗೆ ೨೦ ಸದಸ್ಯರ ಭಾರತೀಯ ಮಹಿಳಾ ಹಾಕಿ ತಂಡ ಪ್ರಕಟ

***************

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮಿಳುನಾಡಿನ ಮಧುರೈನಲ್ಲಿಂದು ಮಧ್ಯಾಹ್ನ ೪ ಸಾವಿರದ ೪೦೦ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಮೂಲಸೌಕರ್ಯ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು. ಈ ಯೋಜನೆಗಳ ಪೈಕಿ ಕುಂಭಕೋಣಂ, ಯೆರ್‌ಕಾಡ್ ಮತ್ತು ವೆಲ್ಲೂರುಗಳಲ್ಲಿ ತಲಾ ಒಂದರಂತೆ ಮೂರು ಹೊಸ ಆಕಾಶವಾಣಿ ಎಫ್.ಎಂ ಕೇಂದ್ರಗಳು ಸೇರಿದ್ದು, ಇವು ಪ್ರಾದೇಶಿಕ ವ್ಯಾಪ್ತಿ ವಿಸ್ತರಿಸುತ್ತಾ ಅಡೆತಡೆಯಿಲ್ಲದ ಪ್ರಸರಣ ಖಾತರಿಪಡಿಸಲಿವೆ. ಬಳಿಕ ಎನ್‌ಡಿಎ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ, ಇಂದಿನ ಕಾರ್ಯಕ್ರಮವು ತಮಿಳುನಾಡಿನ ಅಭಿವೃದ್ಧಿಯ ಪಯಣದಲ್ಲಿ ಹೆಮ್ಮೆಯ ಅಧ್ಯಾಯವಾಗಿದೆ ಎಂದರು. ಈ ಯೋಜನೆಗಳು ಸಂಪರ್ಕ ರೂಪಾಂತರಿಸಲಿವೆ, ಆರ್ಥಿಕತೆ ಉತ್ತೇಜಿಸಲಿವೆ, ಉದ್ಯೋಗ ಸೃಷ್ಟಿಸಲಿವೆ, ಈ ಮೂಲಕ ಲಕ್ಷಾಂತರ ಜನರ ಜೀವನ ಪರಿವರ್ತನೆಯಾಗಲಿದೆ.

ಉತ್ತಮ ರಸ್ತೆಗಳಿಂದಾಗಿ ರೈತರು ಮಾರುಕಟ್ಟೆಗಳನ್ನು ಸುಲಭವಾಗಿ ತಲುಪಬಹುದಾಗಿದೆ, ಪ್ರವಾಸಿಗರಿಗೆ ಪ್ರಯಾಣ ಸುಲಭವಾಗಲಿದೆ ಮತ್ತು ಉದ್ಯಮಗಳಿಗೆ ಶೀಘ್ರ ಸಾಗಣೆ ಸಾಧ್ಯವಾಗಲಿದೆ ಎಂದು ಅವರು ಹೇಳಿದರು. ಬಳಿಕ ತಿರುಪ್ಪರಣಕುಂಡ್ರಂ ನಲ್ಲಿರುವ ಸುಬ್ರಹ್ಮಣ್ಯ ಸ್ವಾಮಿ ದೇವಾಲಯದಲ್ಲಿ ಪ್ರಧಾನಮಂತ್ರಿ ಪ್ರಾರ್ಥನೆ ಸಲ್ಲಿಸಿದರು.

***************

ಇರಾನ್ ನ ಪರಮೋಚ್ಚ ನಾಯಕ ಅಯೋತಲ್ಲಾ ಅಲಿ ಖಮೇನಿ ಹತ್ಯೆಗೆ ವಿವಿಧ ರಾಷ್ಟ್ರಗಳಿಂದ ಸಂತಾಪಗಳ ಮಹಾಪೂರ ಹರಿದುಬರುತ್ತಿದೆ. ಹಲವೆಡೆ ಪ್ರತಿಭಟನೆಗಳು ವ್ಯಕ್ತವಾಗಿವೆ. ಇರಾನ್‌ನಲ್ಲಿ ಸಾವಿರಾರು ಜನರು ನೆರೆದು ಸಂತಾಪ ಸೂಚಿಸಿದರು. ಭಾರತದ ಹಲವೆಡೆ ಸಂತಾಪ ಸಭೆ ನಡೆಯಿತು. ಪಾಕಿಸ್ತಾನದಲ್ಲಿ ಅಮೆರಿಕ ರಾಯಭಾರ ಕಚೇರಿಯೆಡೆಗೆ ಪ್ರತಿಭಟನಾಕಾರರು ತೆರಳುತ್ತಿದ್ದಾಗ ಪೊಲೀಸರ ನಡುವೆ ಉಂಟಾದ ಘರ್ಷಣೆಯಲ್ಲಿ ೧೦ ಜನರು ಗಾಯಗೊಂಡಿದ್ದಾರೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಖಮೇನಿ ಹತ್ಯೆಯನ್ನು ಖಂಡಿಸಿದ್ದು, ಇದು ಅಂತಾರಾಷ್ಟ್ರೀಯ ಕಾನೂನು ಮತ್ತು ಮಾನವೀಯತೆಯ ಉಲ್ಲಂಘನೆ ಎಂದಿದ್ದಾರೆ.

ರಷ್ಯಾ-ಇರಾನಿನ ಸಂಬಂಧಗಳನ್ನು ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯಾಗಿ ಬಲಪಡಿಸುವಲ್ಲಿ ಖಮೇನಿ ಅವರು ಮಹತ್ವದ ಪಾತ್ರ ವಹಿಸಿದ್ದರು ಎಂದು ಪುಟಿನ್ ಸ್ಮರಿಸಿದ್ದಾರೆ.

***************

ಲೆಬನಾನ್‌ನಲ್ಲಿರುವ ಎಲ್ಲಾ ಭಾರತೀಯ ಪ್ರಜೆಗಳು ಅನಗತ್ಯ ಪ್ರಯಾಣ ಕೈಗೊಳ್ಳದೆ ಜಾಗರೂಕರಾಗಿರುವಂತೆ ಮತ್ತು ಸ್ಥಳೀಯವಾಗಿ ಸೂಚಿಸುವ ಸುರಕ್ಷತಾ ಮತ್ತು ತುರ್ತು ಕಾರ್ಯವಿಧಾನಗಳನ್ನು ಪಾಲಿಸುವಂತೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಭಾರತೀಯ ಪ್ರಜೆಗಳು ರಾಯಭಾರ ಕಚೇರಿಯ ದೂರವಾಣಿ ಸಂಖ್ಯೆ - +೯ ೬ ೧ ೭ ೬ ೮ ೬ ೦ ೧ ೨ ೮ ಅಥವಾ ಇಮೇಲ್ cons.beirut@mea.gov.in ನಲ್ಲಿ ಸಂಪರ್ಕಿಸಬಹುದು ಎಂದು ಸಚಿವಾಲಯ ಹೇಳಿದೆ.

****************

ಪಶ್ಚಿಮ ಏಷ್ಯದಲ್ಲಿ ಉದ್ಭವಿಸಿರುವ ಭೌಗೋಳಿಕ, ರಾಜಕೀಯ ಉದ್ವಿಗ್ನತೆಯಿಂದಾಗಿ ಭಾರತೀಯ ವಿಮಾನಯಾನ ಸಂಸ್ಥೆಗಳು ಇಂದು ಸುಮಾರು ೩೫೦ ವಿಮಾನಗಳ ಸಂಚಾರವನ್ನು ರದ್ದುಗೊಳಿಸಿದೆ. ಪ್ರಯಾಣಿಕರು ವಿಮಾನ ನಿಲ್ದಾಣಕ್ಕೆ ಬರುವ ಮುನ್ನ ಸಂಬಂಧಪಟ್ಟ ವಿಮಾನ ಸಂಸ್ಥೆಗಳನ್ನು ಸಂಪರ್ಕಿಸಿ ಖಚಿತ ಮಾಹಿತಿ ಪಡೆಯುವಂತೆ ನಾಗರಿಕ ವಿಮಾನಯಾನ ಸಚಿವಾಲಯ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದೆ.

****************

ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನ ಪರಿಸ್ಥಿತಿ ಹಿನ್ನೆಲೆಯಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳತ್ತ ಹಾರಾಟ ನಡೆಸುವ ವಿಮಾನ ಸೇವೆಯಲ್ಲಿ ವ್ಯತ್ಯಯ ಅಥವಾ ಬದಲಾವಣೆಯಾಗಬಹುದು ಎಂದು ದೆಹಲಿ ವಿಮಾನ ನಿಲ್ದಾಣ ಮುನ್ಸೂಚನೆ ನೀಡಿದೆ. ವಿಮಾನ ನಿಲ್ದಾಣಕ್ಕೆ ತೆರಳುವ ಮುನ್ನ ಪ್ರಯಾಣಿಕರು ತಮ್ಮ ವಿಮಾನಯಾನ ಸಂಸ್ಥೆಗಳನ್ನು ಸಂಪರ್ಕಿಸಲು ಸೂಚಿಸಲಾಗಿದೆ. ಪ್ರಯಾಣಿಕರು ಜಾಲತಾಣ www.newdelhiairport.in ಸೇರಿದಂತೆ ಅಧಿಕೃತ ಮೂಲಗಳಿಂದ ತಾಜಾ ಮಾಹಿತಿ ಪಡೆಯಬಹುದು.

****************

ಪಶ್ಚಿಮ ಏಷ್ಯಾ ಭಾಗದಲ್ಲಿನ ಅನಿಶ್ಚಿತತೆಯಿಂದಾಗಿ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ - ಸಿಬಿಎಸ್‌ಇ ಆ ಪ್ರದೇಶಗಳಲ್ಲಿ ನಾಳೆ ನಿಗದಿಯಾಗಿರುವ ೧೦ ಮತ್ತು ೧೨ನೇ ತರಗತಿ ಪರೀಕ್ಷೆಗಳನ್ನು ಮುಂದೂಡಿದೆ. ಬಹ್ರೇನ್, ಇರಾನ್, ಕುವೈತ್, ಓಮನ್, ಕತಾರ್, ಸೌದಿ ಅರೇಬಿಯಾ ಮತ್ತು ಯುಎಇ ಗಳಲ್ಲಿನ ಪ್ರಸ್ತುತದ ಸ್ಥಿತಿಗತಿ ಹಿನ್ನೆಲೆಯಲ್ಲಿ ಈ ಮಧ್ಯಪ್ರಾಚ್ಯ ದೇಶಗಳಲ್ಲಿ ಪರೀಕ್ಷೆ ಮುಂದೂಡುವ ನಿರ್ಧಾರ ಕೈಗೊಳ್ಳಲಾಗಿದ್ದು, ಮುಂದೂಡಲ್ಪಟ್ಟ ಪರೀಕ್ಷಾ ದಿನಾಂಕವನ್ನು ಸಿಬಿಎಸ್‌ಇ ನಂತರ ಪ್ರಕಟಿಸಲಿದೆ. ಈ ತಿಂಗಳ ೫ ರಿಂದ ನಡೆಯಲಿರುವ ಪರೀಕ್ಷೆಗಳ ಬಗ್ಗೆ ಮಂಗಳವಾರ ಸ್ಥಿತಿಗತಿ ಆಧರಿಸಿ ನಿರ್ಧಾರ ಕೈಗೊಳ್ಳಲಾಗುವುದು.

****************

ಅಲಿ ಖಮೇನಿಯವರ ಹತ್ಯೆಯ ನಂತರ ಹಿರಿಯ ಧರ್ಮಗುರು ಅಯತೊಲ್ಲಾ ಅಲಿರೆಜಾ ಅರಾಫಿ ಅವರು ಇರಾನ್‌ನ ಮಧ್ಯಂತರ ಸರ್ವೋಚ್ಚ ನಾಯಕರಾಗಿ ಸೇವೆ ಸಲ್ಲಿಸಲಿದ್ದಾರೆ. ಇರಾನ್‌ನ ಸಾಂವಿಧಾನಿಕ ಪ್ರಕ್ರಿಯೆಯ ಅಡಿಯಲ್ಲಿ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವವರೆಗಿನ ಅವಧಿಗೆ ಸರ್ವೋಚ್ಚ ನಾಯಕನ ಕರ್ತವ್ಯಗಳನ್ನು ಅಯತೊಲ್ಲಾ ಅಲಿರೆಜಾ ಅರಾಫಿ ತಾತ್ಕಾಲಿಕವಾಗಿ ನಿರ್ವಹಿಸಲಿದ್ದಾರೆ. ಇರಾನ್‌ನ ಸಾಂವಿಧಾನಿಕ ಕಾರ್ಯವಿಧಾನದ ಪ್ರಕ್ರಿಯೆಯು ಮಧ್ಯಂತರ ಮಂಡಳಿಯು ಅಧ್ಯಕ್ಷರು, ಮುಖ್ಯ ನ್ಯಾಯಾಧೀಶರು ಮತ್ತು ಗಾರ್ಡಿಯನ್ ಕೌನ್ಸಿಲ್‌ನ ಒಬ್ಬ ಧರ್ಮಗುರುವನ್ನು ಒಳಗೊಂಡಿದೆ. ಖಮೇನಿಯವರ ಸಾವಿನ ನಂತರ ಇರಾನ್ ಪರಿವರ್ತನೆಯ ಹಂತಕ್ಕೆ ಪ್ರವೇಶಿಸುತ್ತಿದ್ದಂತೆ ಈ ಸಂಸ್ಥೆ ಜಂಟಿಯಾಗಿ ದೇಶವನ್ನು ಮುನ್ನಡೆಸಲಿದೆ. ಇರಾನ್‌ನ ಸೇನಾ ನಾಯಕ ಜನರಲ್ ಅಹಮ್ಮದ್ ವಹಿದಿ ಅವರನ್ನು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ನ ಕಮಾಂಡಾರ್ ಆಗಿ ನೇಮಿಸಲಾಗಿದೆ. ಮೊಹಮ್ಮದ್ ಫೌರ್ ಹತ್ಯೆ ಬಳಿಕ ವಹಿದಿ ಅವರನ್ನು ನೇಮಿಸಲಾಗಿದೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ.

****************

ದೇಶದ ಸರಕು ಮತ್ತು ಸೇವಾ ತೆರಿಗೆ-ಜಿಎಸ್‌ಟಿ ಸಂಗ್ರಹದಲ್ಲಿ ಏರಿಕೆ ಕಂಡು ಬಂದಿದ್ದು, ಈ ವರ್ಷದ ಫೆಬ್ರವರಿಯಲ್ಲಿ ಒಟ್ಟು ೧.೮೩ ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ತೆರಿಗೆ ಸಂಗ್ರಹವಾಗಿದೆ. ಕಳೆದ ವರ್ಷದ ಫೆಬ್ರವರಿ ತಿಂಗಳ ಜಿಎಸ್‌ಟಿ ಸಂಗ್ರಹ ಸುಮಾರು ೧.೬೯ ಲಕ್ಷ ಕೋಟಿ ರೂಪಾಯಿಗಳಾಗಿದ್ದು, ಇದಕ್ಕೆ ಹೋಲಿಸಿದರೆ ಈ ಬಾರಿ ಶೇಕಡ ೮.೧ ರಷ್ಟು ಏರಿಕೆ ದಾಖಲಾಗಿದೆ. ಒಟ್ಟು ಸಂಗ್ರಹವಾದ ತೆರಿಗೆಯಲ್ಲಿ ಕೇಂದ್ರ ಜಿಎಸ್‌ಟಿ ೩೭ ಸಾವಿರದ ೪೭೩ ಕೋಟಿ ರೂಪಾಯಿಗಳಾಷ್ಟಾಗಿದ್ದು, ರಾಜ್ಯಗಳ ಜಿಎಸ್‌ಟಿ ೪೫ ಸಾವಿರದ ೯೦೦ ಕೋಟಿ ರೂಪಾಯಿಯಷ್ಟಿದೆ. ಒಂದು ಲಕ್ಷ ಕೋಟಿ ರೂಪಾಯಿಗೂ ಹೆಚ್ಚು ಸಂಯೋಜಿತ ಜಿ ಎಸ್ ಟಿ ಸಂಗ್ರಹವಾಗಿದೆ.

***************

ಜಮ್ಮು ಮತ್ತು ಕಾಶ್ಮೀರದಲ್ಲಿ ಇದೇ ೩ ರಂದು ನಡೆಯಲಿರುವ ರಾಷ್ಟ್ರೀಯ ಆಡಳಿತ ಸಮ್ಮೇಳನಕ್ಕೆ ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿ ಖಾತೆ ರಾಜ್ಯ ಸಚಿವ ಡಾ. ಜಿತೇಂದ್ರ ಸಿಂಗ್ ಮತ್ತು ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಚಾಲನೆ ನೀಡಲಿದ್ದಾರೆ. 'ಜಿಲ್ಲೆಗಳ ಸಮಗ್ರ ಅಭಿವೃದ್ಧಿ: ವಿಕಸಿತ ಭಾರತಕ್ಕಾಗಿ ಆಡಳಿತ ಪರಿವರ್ತನೆ' ಈ ಕಾರ್ಯಕ್ರಮದ ವಿಷಯವಾಗಿದೆ. ಸಾರ್ವಜನಿಕ ಆಡಳಿತದಲ್ಲಿ ಶ್ರೇಷ್ಠತೆಗಾಗಿ ಪ್ರಧಾನಮಂತ್ರಿಗಳ ಪ್ರಶಸ್ತಿಗಳ ವಿವಿಧ ವಿಭಾಗಗಳ ಅಡಿಯಲ್ಲಿ ಮಾನ್ಯತೆ ಪಡೆದ ಆಡಳಿತ ಮಾದರಿಗಳನ್ನು ಈ ಸಮ್ಮೇಳನ ಪ್ರದರ್ಶಿಸಲಿದೆ. ಹಿರಿಯ ಆಡಳಿತಗಾರರು, ಇತರ ಅಧಿಕಾರಿಗಳು ಸೇರಿದಂತೆ ದೇಶಾದ್ಯಂತ ೨೦೦ಕ್ಕೂ ಹೆಚ್ಚು ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ ಎಂದು ಸಚಿವಾಲಯ ತಿಳಿಸಿದೆ.

***************

ನವದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಐಸಿಸಿ ಪುರುಷರ ಟಿ೨೦ ವಿಶ್ವಕಪ್ ಕ್ರಿಕೆಟ್‌ನಲ್ಲಿ ಜಿಂಬಾಬ್ವೆ ಎದುರು ದಕ್ಷಿಣ ಆಫ್ರಿಕಾ ೫ ವಿಕೆಟ್‌ಗಳ ಜಯ ಸಾಧಿಸಿದೆ. ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಜಿಂಬಾಬ್ವೆ ನಿಗದಿತ ೨೦ ಓವರ್‌ಗಳಲ್ಲಿ ೭ ವಿಕೆಟ್ ನಷ್ಟಕ್ಕೆ ೧೫೩ ರನ್ ಗಳಿಸಿತು. ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ ಇನ್ನು ೧೩ ಎಸೆತಗಳು ಬಾಕಿ ಇರುವಂತೆಯೇ ೫ ವಿಕೆಟ್ ನಷ್ಟಕ್ಕೆ ೧೫೪ ರನ್ ಗಳಿಸಿ ಗೆಲುವಿನ ನಗೆ ಬೀರಿತು. ಈಡನ್ ಗಾರ್ಡನ್ಸ್‌ನಲ್ಲಿ ಪ್ರಗತಿಯಲ್ಲಿರುವ ಐಸಿಸಿ ಪುರುಷರ ಟಿ-೨೦ ವಿಶ್ವಕಪ್ ಕ್ರಿಕೆಟ್‌ನ ಅಂತಿಮ ಸೂಪರ್ ೮ರ ಮತ್ತೊಂದು ಪಂದ್ಯದಲ್ಲಿ ಭಾರತ ಹಾಗೂ ವೆಸ್ಟ್ ಇಂಡೀಸ್ ಮುಖಾಮುಖಿಯಾಗಿವೆ. ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

***************

ತೆಲಂಗಾಣದ ಹೈದರಾಬಾದ್‌ನಲ್ಲಿ ಇದೇ ೮ ರಿಂದ ೧೪ ರವರೆಗೆ ನಡೆಯಲಿರುವ ಫೆಡರೇಷನ್ ಇಂಡಿಯಾ ಹಾಕಿ ವಿಶ್ವಕಪ್ ೨೦೨೬ರ ಅರ್ಹತಾ ಪಂದ್ಯಗಳಿಗೆ ಹಾಕಿ ಇಂಡಿಯಾ ೨೦ ಸದಸ್ಯರ ಭಾರತೀಯ ಮಹಿಳಾ ಹಾಕಿ ತಂಡವನ್ನು ಪ್ರಕಟಿಸಿದೆ. ಆಗಸ್ಟ್‌ನಲ್ಲಿ ಬೆಲ್ಜಿಯಂ ಮತ್ತು ನೆದರ್‌ಲ್ಯಾಂಡ್ ನಲ್ಲಿ ನಡೆಯಲಿರುವ ವಿಶ್ವಕಪ್ ಗೆ ಭಾರತ, ಇಂಗ್ಲೆಂಡ್, ಸ್ಕಾಟ್ಲೆಂಡ್, ಕೊರಿಯಾ, ಇಟಲಿ, ಉರುಗ್ವೆ, ವೇಲ್ಸ್ ಮತ್ತು ಆಸ್ಟ್ರಿಯಾ ಮೂರು ಅರ್ಹತಾ ಸ್ಥಾನಗಳಿಗಾಗಿ ಸ್ಪರ್ಧಿಸಲಿವೆ. ತಂಡಗಳನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ, ಇಂಗ್ಲೆಂಡ್, ಕೊರಿಯಾ, ಇಟಲಿ ಮತ್ತು ಆಸ್ಟ್ರಿಯಾ ಎ ಗುಂಪಿನಲ್ಲಿದ್ದು, ಆತಿಥೇಯ ಭಾರತ, ಸ್ಕಾಟ್ಲೆಂಡ್, ಉರುಗ್ವೆ ಮತ್ತು ವೇಲ್ಸ್ ರಾಷ್ಟ್ರಗಳು ಪೂಲ್ ಬಿ ನಲ್ಲಿವೆ.

***************

ದುಬೈನಿಂದ ನಿನ್ನೆ ವಿಮಾನವೊಂದು ರಾಜತಾಂತ್ರಿಕರನ್ನು ಕರೆದೊಯ್ದಿದ್ದು ಸ್ಥಳಾಂತರಕ್ಕೆ ವಿದೇಶಾಂಗ ವ್ಯವಹಾರಗಳ ಸಚಿವಾಲಯದೊಂದಿಗೆ ನೋಂದಾಯಿಸಿಕೊಳ್ಳಬಹುದು ಎಂಬ ಸಾಮಾಜಿಕ ಮಾಧ್ಯಮ ಪೋಸ್ಟ್ ಸತ್ಯಕ್ಕೆ ದೂರವಾಗಿದ್ದು, ಇಂತಹ ನಕಲಿ ಸುದ್ದಿಗಳನ್ನು ನಂಬದಂತೆ ಸಚಿವಾಲಯದ ಸತ್ಯಾನ್ವೇಷಣ ಘಟಕ ಜನರಲ್ಲಿ ಮನವಿ ಮಾಡಿದೆ.

***************

ಇರಾನಿನ ಮೇಲಿನ ದಾಳಿ ಆರಂಭವಾದಾಗಿನಿಂದ ಯುನೈಟೆಡ್ ಅರಬ್ ಎಮಿರೈಟ್ಸ್-ಯುಎಇಯ ರಕ್ಷಣಾ ಸಚಿವಾಲಯ ದೇಶದ ಗಡಿಯಡೆಗಿನ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಹೊಡೆದುರುಳಿಸುತ್ತಿದ್ದು, ಈ ಕಾರ್ಯಾಚರಣೆಯ ವೇಳೆ ಹೊಡೆದುರುಳಿಸಲಾದ ಡ್ರೋನ್‌ಗಳ ಅವಶೇಷಗಳು ದುಬೈನ ಎರಡು ಮನೆಗಳ ಮೇಲೆ ಬಿದ್ದ ಪರಿಣಾಮ ಇಬ್ಬರು ಗಾಯಗೊಂಡಿದ್ದಾರೆ ಎಂದು ಯುಎಇ ಪ್ರಾಧಿಕಾರ ತಿಳಿಸಿದೆ.

********ಮುಕ್ತಾಯ********